# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 570 (660) |
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 2021 ರಿಂದ ಈವರೆವಿಗೂ ವರದಿಯಾದ ಅರಣ್ಯ ಬೆಂಕಿ ಘಟನೆಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ 2021 ರಿಂದ 2026 (ದಿನಾಂಕ 03.03.2026ರವರೆಗೆ) Satellite ಮಾಹಿತಿಯಂತೆ ವರದಿಯಾದ ಅರಣ್ಯ ಬೆಂಕಿ ಸಂದೇಶಗಳ (Forest Fire Alerts) ವಿವರ ಈ ಕೆಳಕಂಡಂತಿದೆ. (ಕೋಷ್ಟಕ ಕೆಳಗೆ) |
| ಆ) | 2021 ರಿಂದ ಈವರೆವಿಗೂ ಬೆಂಕಿಯಿಂದ ಪರಿಣಾಮ ಬೀರಿದ ವಿಭಾಗವಾರು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು; (ಅರಣ್ಯ ಪ್ರದೇಶವಾರು, ಜಿಲ್ಲಾವಾರು ಮಾಹಿತಿ ನೀಡುವುದು) | 2021 ರಿಂದ ಈವರೆವಿಗೂ ಬೆಂಕಿಯಿಂದ ಪರಿಣಾಮ ಬೀರಿದ ವಿಭಾಗವಾರು ಅರಣ್ಯ ಪ್ರದೇಶದ ಅಂದಾಜು ವಿಸ್ತೀರ್ಣದ ವಿವರ ಮಾಹಿತಿಯನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ.<br>(ಅರಣ್ಯ ಇಲಾಖೆಯ ಆಡಳಿತವನ್ನು ಅರಣ್ಯ ವಿಭಾಗವಾರು ನಿರ್ವಹಿಸಲಾಗುತ್ತಿದ್ದು, ಹಲವಾರು ವಿಭಾಗಗಳ ವಿಸ್ತೀರ್ಣವು ಹಾಗೂ ಅರಣ್ಯ ಪ್ರದೇಶಗಳ ಒಂದಕ್ಕಿಂತ ಹೆಚ್ಚಿನ ಜಿಲ್ಲೆಗಳ ವ್ಯಾಪ್ತಿಗೆ ಬರುತ್ತಿರುವುದರಿಂದ ಅರಣ್ಯ ಇಲಾಖೆಯಲ್ಲಿ ಅಂಕಿ ಅಂಶ ವಿವರಗಳನ್ನು ವಿಭಾಗವಾರು ನಿರ್ವಹಿಸಲಾಗುತ್ತಿದ್ದು, ಅದರಂತೆ ಅರಣ್ಯ ವಿಭಾಗವಾರು ಮಾಹಿತಿಯನ್ನು ಒದಗಿಸಲಾಗಿದೆ). |
| ಇ) | ಕಳೆದ 2021 ರಿಂದ ಈವರೆವಿಗೂ ಬೆಂಕಿಯಿಂದ ಪರಿಣಾಮ ಬೀರಿದ ಹುಲ್ಲುಗಾವಲು ಹಾಗೂ ಅರಣ್ಯ ಕುರುಚಲ ಪ್ರದೇಶದ ವಿಸ್ತೀರ್ಣ ಎಷ್ಟು; | ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ವರ್ಷ-ವರ್ಷ ಬೀಳುತ್ತಿರುವ ಅರಣ್ಯ ಬೆಂಕಿಯು ಮೂಲತಃ ನೆಲಮಟ್ಟದ ಬೆಂಕಿ(Ground fire)ಯಾಗಿದ್ದು, ಮರಬೆಂಕಿ (Crown fire) ಇರುವುದಿಲ್ಲ. ಸದರಿ ಅರಣ್ಯ ಬೆಂಕಿ ಘಟನೆಗಳಲ್ಲಿ ಬೆಂಕಿಯಿಂದ ಪರಿಣಾಮ ಬೀರಿದ ಒಟ್ಟಾರೆ ಪ್ರದೇಶದ ಅಂದಾಜು ವಿಸ್ತೀರ್ಣವು ಈಗಾಗಲೇ ಉಪ ಪ್ರಶ್ನೆ 'ಆ'ಗೆ ಸಂಬಂಧಿಸಿದ **ಅನುಬಂಧ**ದಲ್ಲಿ ಒದಗಿಸಲಾಗಿದ್ದು, ಪರಿಣಾಮ ಬೀರಿದ ಹುಲ್ಲುಗಾವಲು ಹಾಗೂ ಅರಣ್ಯ ಕುರುಚಲ ಪ್ರದೇಶದ ಪ್ರತ್ಯೇಕ ವಿಸ್ತೀರ್ಣದ ವಿವರಗಳನ್ನು ನಿರ್ವಹಿಸಿರುವುದಿಲ್ಲ. |

| ವರ್ಷ | ಅರಣ್ಯ ಪ್ರದೇಶದೊಳಗೆ | ಅರಣ್ಯ ಗಡಿ ಯಿಂದ ಹೊರಗಿನ 500 ಮೀ. ಪಟ್ಟಿಯಲ್ಲಿ | ಒಟ್ಟು |
|---|---|---|---|
| 2021 | 8321 | 3843 | **12164** |
| 2022 | 7794 | 4058 | **11852** |
| 2023 | 18801 | 4884 | **23685** |
| 2024 | 7942 | 3221 | **11163** |
| 2025 | 12627 | 5567 | **18194** |
| 2026 (ದಿ: 03 03 2026 ರವರೆಗೆ) | 6987 | 3183 | **10170** |

(signature)

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಣ) | ಮೇಲ್ಕಾಣಿಸಿದ ಅವಧಿಯಲ್ಲಿ ಕಾಡ್ಗಿಚ್ಚು ಅಥವಾ ಬೆಂಕಿ ಆಕಸ್ಮಿಕ ಅವಘಡಗಳಿಂದ ವನ್ಯಜೀವಿಗಳು ಮೃತ ಪಟ್ಟಿವೆಯೇ (ವಿವರ ನೀಡುವುದು) | ಈ ಅವಧಿಯಲ್ಲಿ ಕಾಡ್ಗಿಚ್ಚು ಅಥವಾ ಬೆಂಕಿ ಆಕಸ್ಮಿಕ ಅವಘಡಗಳಿಂದ ವನ್ಯಜೀವಿಗಳು ಮೃತಪಟ್ಟಿರುವ ಬಗ್ಗೆ ಯಾವುದೇ ವರದಿಯಾಗಿರುವುದಿಲ್ಲ. |
| ಉ) | ಬೇಸಿಗೆ ಸಮೀಪಿಸುತ್ತಿರುವುದರಿಂದ ಕಾಡ್ಗಿಚ್ಚು ಅಥವಾ ಬೆಂಕಿ ಆಕಸ್ಮಿಕ ಅವಘಡಗಳಿಂದ ಸಸ್ಯಗಳು, ಮರಗಳು ಮತ್ತು ಪ್ರಾಣಿಗಳನ್ನು ರಕ್ಷಿಸಲು ಸರ್ಕಾರ ತೆಗೆದುಕೊಂಡ ಮುಂಜಾಗ್ರತ ಕ್ರಮಗಳೇನು? | ಬೇಸಿಗೆ ಸಮೀಪಿಸುತ್ತಿರುವುದರಿಂದ ಕಾಡ್ಗಿಚ್ಚು ಅಥವಾ ಬೆಂಕಿ ಆಕಸ್ಮಿಕ ಅವಘಡಗಳಿಂದ ಸಸ್ಯಗಳು, ಮರಗಳು ಮತ್ತು ಪ್ರಾಣಿಗಳನ್ನು ರಕ್ಷಿಸಲು ಸರ್ಕಾರ ತೆಗೆದುಕೊಂಡ ಮುಂಜಾಗ್ರತ ಕ್ರಮಗಳು ಈ ಕೆಳಕಂಡಂತಿರುತ್ತದೆ<br>• ಕಾಡ್ಗಿಚ್ಚಿನ ಋತುಮಾನವು ಪ್ರಾರಂಭವಾಗುವ ಸಮಯದಲ್ಲಿ ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ನಿಯಂತ್ರಿತ ಬೆಂಕಿ (Controlled Burning) ಮೂಲಕ ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಕಾಡ್ಗಿಚ್ಚು ತೀವ್ರತೆಯನ್ನು ಕಡಿಮೆಗೊಳಿಸುವುದು;<br>• ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ರೇಖೆಗಳನ್ನು ನಿರ್ಮಾಣ ಹಾಗೂ ನಿರ್ವಹಣೆ ಮಾಡುವುದು;<br>• ಬೇಸಿಗೆ ಕಾಲದಲ್ಲಿ ಅಗತ್ಯತೆಯಂತೆ ಜನವರಿ ಮಾಹೆಯಿಂದ ಮೇ ಮಾಹೆಯವರೆಗೆ ಸ್ಥಳೀಯರನ್ನು ಬೆಂಕಿ ಕಾವಲುಗಾರರನ್ನಾಗಿ ನಿಯೋಜಿಸಿ ಕಾಡ್ಗಿಚ್ಚನ್ನು ತಡೆಗಟ್ಟುವುದು ಹಾಗೂ ನಂದಿಸುವುದು;<br>• ಅರಣ್ಯದ ಅಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಕಾಡ್ಗಿಚ್ಚು ಬೀಳದಂತೆ ತಡೆಗಟ್ಟಲು ತಿಳುವಳಿಕೆ ನೀಡುವುದು;<br>• ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಅಗತ್ಯವಿರುವ ನೀರಿನ ಲಭ್ಯತೆ ಇರುವ ಸ್ಥಳಗಳನ್ನು ಗುರುತಿಸಿಕೊಳ್ಳುವುದು;<br>• ಅರಣ್ಯ ಪ್ರದೇಶಗಳಲ್ಲಿ ಅಗತ್ಯತೆಯಂತೆ ಸೂಕ್ತ ಸ್ಥಳಗಳಲ್ಲಿ Fire Watch Towersಗಳ ಮೂಲಕ ಕಾಡ್ಗಿಚ್ಚು ಬೀಳುವ ಸ್ಥಳಗಳಲ್ಲಿ ವೀಕ್ಷಿಸಿ ಸಂಬಂಧಿಸಿದ ಸಿಬ್ಬಂದಿಗಳಿಗೆ ಸಂದೇಶದ ಮೂಲಕ ಎಚ್ಚರಿಸುವುದು;<br>• ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗಳಿಗೆ ತರಬೇತಿಯನ್ನು ಏರ್ಪಡಿಸುವುದು;<br>• ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಸಂಬಂಧಿಸಿದ ಇಲಾಖೆಗಳು, ಗ್ರಾಮ ಅರಣ್ಯ ಸಮಿತಿಗಳು (Village Forest Committees / Eco- Development Committeeಗಳು, ಸ್ಥಳೀಯ ಸಂಘ-ಸಂಸ್ಥೆಗಳು ಮತ್ತು ಇತರರ ಸಹಯೋಗ ಪಡೆದುಕೊಳ್ಳಲು ಕಾರ್ಯಕ್ರಮ / ಕಾರ್ಯಗಾರಗಳನ್ನು ಆಯೋಜಿಸುವುದು;<br>• ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ Geospatial Information Portal ನ ಮೂಲಕ Satellite Imageryಯ ಆಧಾರದ ಮೇಲೆ ಸಂಪೂರ್ಣ ಸ್ವಯಂಚಾಲಿತ ಅರಣ್ಯ ಬೆಂಕಿ ಸಂದೇಶ(Forest Fire Alerts)ಗಳನ್ನು ಆಯಾ ಸಿಬ್ಬಂದಿಯ ಮೊಬೈಲ್ ಫೋನಿಗೆ ಕಳುಹಿಸಲಾಗುತ್ತಿದ್ದು, ಸಿಬ್ಬಂದಿಗಳು ಬೆಂಕಿ ಬಿದ್ದ ಕ್ಷೇತ್ರಕ್ಕೆ ಭೇಟಿ ನೀಡಿ ಕಾಡ್ಗಿಚ್ಚನ್ನು ನಂದಿಸಿ, ಛಾಯಾಚಿತ್ರವನ್ನು ಸದರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪೋರ್ಟಲ್ ಮೂಲಕ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸುತ್ತಿರುತ್ತಾರೆ.<br>• ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯ ಸಹಯೋಗದೊಂದಿಗೆ ಅರಣ್ಯ ಇಲಾಖೆಯ ಕೇಂದ್ರ ಸ್ಥಾನದಲ್ಲಿ 24X7 ಕಾಡ್ಗಿಚ್ಚು ಉಸ್ತುವಾರಿ ಕೋಶ (Forest Fire Monitoring Cell) ದ ತಂಡವು ಎಲ್ಲಾ ಅರಣ್ಯ ಬೆಂಕಿ ಸಂದೇಶ(Forest Fire Alerts)ಗಳಿಗೆ ಹಾಗೂ ಅರಣ್ಯ ಇಲಾಖೆಯ ಸಹಾಯವಾಣಿ (Forest Helpline) 1926ರ ಮೂಲಕ ಸಾರ್ವಜನಿಕರಿಂದ ಸ್ವೀಕರಿಸಿದ ಬೆಂಕಿ ಸಂದೇಶಗಳನ್ನು ಸದರಿ ಪೋರ್ಟಲ್ ಮೂಲಕ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸಲು ಸಿಬ್ಬಂದಿಗಳನ್ನು ಸ್ಪಂದಿಸಲಾಗುತ್ತಿದೆ.<br>• ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಬೆಂಕಿಯನ್ನು ನಂದಿಸಲು ಹಾಗೂ ಮರ / ವನಸ್ಪತಿ ಗುಂಪುಗಳನ್ನು ಕಡಿದು ಬೆಂಕಿಯನ್ನು ಹರಡುವಿಕೆಯನ್ನು ತಡೆಯಲು ಉಪಯೋಗಿಸಬಹುದಾದ ವಿವಿಧ ರೀತಿಯ ಉಪಕರಣಗಳನ್ನು (ಉದಾಹರಣೆಗಾಗಿ: Blower, Water Sprayer, Brush Cutter, Fire Beater) ಹಾಗೂ ಬೆಂಕಿ ನಿಯಂತ್ರಣಕ್ಕಾಗಿ ನಿಯೋಜಿಸಿರುವ ಸಿಬ್ಬಂದಿಗಳಿಗೆ Water Bottles, Shoes, Gloves, Binoculars, Torch, ಮುಂತಾದವುಗಳನ್ನು ಒದಗಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 75 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

# ಅನುಬಂಧ

## 2021ರಿಂದ 2026ರವರೆಗೆ ಬೆಂಕಿಯಿಂದ ಪರಿಣಾಮ ಬೀರಿದ ವಿಭಾಗವಾರು ಅರಣ್ಯ ಪ್ರದೇಶದ ವಿವರ

*(ಸ್ಥಳೀಯ ಸಿಬ್ಬಂದಿಗಳ ವರದಿಗಳಂತೆ)*

| ಕ್ರ. ಸಂ | ವೃತ್ತ | ವಿಭಾಗ | 2021 | 2022 | 2023 | 2024 | 2025 | 2026 (ದಿ:03.03.2026 ರವರೆಗೆ) |
|---|---|---|---|---|---|---|---|---|
| 1 | Ballari | Ballari | 1410.1 | 326.76 | 1056.9 | 509.4 | 940.4 | 172.5 |
| | | Chitradurga | 857.78 | 779.85 | 2045.3 | 943.24 | 1497.21 | 794.9 |
| | | Davangere | 184.6 | 490.9 | 789.4 | 184.45 | 251.9 | 117.54 |
| | | Koppal | 2.6 | 118 | 364.5 | 6 | 135.59 | 69.24 |
| | | Vijayanagara | 734.3 | 501.101 | [illegible] | 324.47 | 1086.272 | 152.06 |
| 2 | Bangalore | Bangalore Rural | 299.82 | 356.947 | 587.45 | 590.2 | 651.602 | 234.85 |
| | | Bangalore Urban | 8.2 | 4 | 5 | 143.11 | 271.6 | 108.795 |
| | | BNP WL | 450.7 | 35.4 | 118.6 | 159.5 | 449.254 | 131.8 |
| | | Chikkaballapura | 202.65 | 579.75 | 1295.3 | 1151.38 | 430.635 | 411.059 |
| | | Kolar | 28 | 17.35 | 8.45 | 100.3 | 45.9 | 22.7 |
| | | Ramanagara | 1598.75 | 660.75 | 1535.22 | 1005.12 | 1432.055 | 1257.4 |
| 3 | Belagavi | Bagalkote | 320.18 | 424.85 | 706.9 | 224.75 | 538.051 | 283.6 |
| | | Belagavi | 463.305 | 843.36 | 2955.46 | 867.015 | 1308.93 | 497.28 |
| | | Gokak | 751.6 | 497.84 | 789.151 | 512.8 | 315.13 | 407.74 |
| | | Vijayapura | 12.5 | 15.5 | 29.6 | 27.05 | 7.8 | 14.5 |
| 4 | Canara | Haliyal | 91.409 | 71.054 | 1451.426 | 227.7 | 74.11 | 83.717 |
| | | Honnavar | 305.924 | 88.71 | 147.703 | 21.35 | 53.25 | 50.748 |
| | | Kali Tiger Reserve | 96.651 | 152.013 | 908.36 | 238.05 | 58.66 | 6.3 |
| | | Karwar | 42.631 | 26.335 | 169.251 | 34.995 | 43.737 | 19.9 |
| | | Sirsi | 85.612 | 46.614 | 1567.432 | 57.95 | 81.38 | 41.02 |
| | | Yellapur | 35.665 | 134.92 | 4214.615 | 1019.425 | 72.97 | 29.276 |
| 5 | Chamarajanagar | Bandipura Tiger Reserve | 17.35 | 19.1 | 28 | 10.1 | 42.89 | 24.7 |
| | | Biligiri Ranganatha Swamy Temple WL | 16.8 | 15.01 | 287.34 | 555.15 | 38 | 33.43 |
| | | Cauvery WL | 376.5 | 49 | 194.7 | 86 | 574.75 | 94.642 |
| | | MM Hills | 45.83 | 11 | 184.175 | 329.45 | 386.71 | 51.4 |
| 6 | Chikmagalur | Bhadra WL | 3.5 | 5.9 | 648 | 2 | 6.4 | 0.83 |
| | | Chikmagalur | 1133.8 | 1000.62 | 1934.25 | 786.36 | 776.2 | 442.45 |
| | | Koppa | 10.5 | 148.26 | 1854.7 | 103.22 | 219.95 | 114.7 |
| 7 | Dharwad | Dharwad | 116 | 144.68 | 1187.23 | 272.55 | 165.694 | 180.06 |
| | | Gadag | 1779.08 | 647.35 | 724.07 | 246.825 | 393.79 | 49.069 |
| | | Haveri | 176.692 | 149.984 | 317.759 | 147.675 | 219.717 | 124.869 |
| 8 | Hassan | Hassan | 391.5 | 1600.25 | 3426.75 | 1370.4 | 1217.57 | 439.59 |
| | | Tumkur | 817.851 | 1080.238 | 1320.338 | 743.264 | 1198.918 | 704.236 |
| 9 | Kalburgi | Bidar | 196.7 | 119.75 | 520.7 | 210.053 | 267.241 | 159.37 |
| | | Kalburgi | 550.6 | 196.25 | 256.5 | 152.35 | 229.06 | 282.62 |
| | | Raichur | 15.24 | 3.27 | 14.1 | 79.92 | 613.31 | 13.08 |
| | | Yadgir | 13.613 | 18.252 | 78.1 | 111.06 | 81.4 | 10.1 |
| 10 | Kodagu | Madikere | 0 | 154.9 | 1982.87 | 86 | 253.31 | 73.5 |
| | | Madikeri WLS | 0 | 13.5 | 7 | 4 | 2.5 | 19.1 |
| | | Nagarahole Tiger Reserve | 0 | 1.7 | 34.5 | 6.5 | 0 | 0 |
| | | Virajpet | 3 | 36.2 | 26.64 | 124.5 | 59.1 | 31.25 |
| 11 | Mangalore | Kudremukh WL | 105.1 | 1201 | 686.29 | 273.28 | 227.41 | 133.61 |
| | | Kundapura | 4.5 | 22.78 | 49.861 | 11.01 | 56.67 | 24.2 |
| | | Mangalore | 75.02 | 23.32 | 890.842 | 46.37 | 93.55 | 90.7 |
| 12 | Mysore | Hunsur | 11.7 | 2.72 | 90.6 | 32.94 | 26.11 | 11.051 |
| | | Mandya | 531.3 | 236.72 | 352.4 | 171.65 | 217.24 | 209.94 |
| | | Mysore | 17.1 | 67.8 | 298.05 | 47.202 | 335.41 | 114.42 |
| | | Mysore WL | 50 | 10.5 | 9.4 | 25.3 | 23.94 | 26.09 |
| 13 | Shimoga | Bhadravathi | 955.6 | 2283.39 | 3305.122 | 2139.95 | 1649.153 | 914.06 |
| | | Sagara | 316.41 | 1250.125 | 4541.906 | 523.29 | 253.098 | 166.08 |
| | | Shimoga | 80.6 | 305.077 | 1279.126 | 332.013 | 171.162 | 49.19 |
| | | Shimoga WL | 16.5 | 49.05 | 579.64 | 22.04 | 61.76 | 113.06 |

Digitally signed by
ANIL KUMAR RATAN
Date: 03-03-2026
16:00:16

ಅಪರ ಪ್ರಧಾನ ಮುಖ್ಯ [illegible] ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ [illegible])